# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ

## SA-2

## 8ನೇ ತರಗತಿ

## ಸಮಾಜ ವಿಜ್ಞಾನ

ರಚನೆ:
ರಾಘವೇಂದ್ರ
ಅನುಕೂಲಕಾರರು
ಸರ್ಕಾರಿ ಪ್ರೌಢಶಾಲೆ ವ್ಯಾಸರಾಜಪುರ
ತಿ.ನರಸೀಪುರ ತಾ. ಮೈಸೂರು ಜಿಲ್ಲೆ
ಮೊಬೈಲ್:9740701904

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ

ವಿಷಯ: ಸಮಾಜ ವಿಜ್ಞಾನ                    ತರಗತಿ: 8ನೇ ತರಗತಿ

| ಉದ್ದಿಷ್ಟವಾರು ಅಂಕಗಳ ಹಂಚಿಕೆ: | | |
|---|---|---|
| ಉದ್ದಿಷ್ಟಗಳು | ಅಂಕಗಳು | ಶೇಕಡವಾರು |
| ಸ್ಮರಣೆ | 06 | 15% |
| ತಿಳುವಳಿಕೆ | 18 | 45% |
| ಅನ್ವಯ | 11 | 28% |
| ಕೌಶಲ | 05 | 12% |
| ಒಟ್ಟು | 40 | 100% |

| ಕಠಿಣತೆ ಮಟ್ಟಕ್ಕನುಗುಣವಾಗಿ ಅಂಕಗಳ ಹಂಚಿಕೆ: | | |
|---|---|---|
| ಕಠಿಣತ ಮಟ್ಟ | ಅಂಕಗಳು | ಶೇಕಡವಾರು |
| ಸುಲಭ | 12 | 30% |
| ಸಾಧಾರಣ | 20 | 50% |
| ಕಠಿಣ | 08 | 20% |
| ಒಟ್ಟು | 40 | 100% |

| ವಿಭಾಗವಾರು ಮತ್ತು ಪ್ರಶ್ನಾವಾರು ಅಂಕಗಳ ಹಂಚಿಕೆ: | | | | | | | | |
|---|---|---|---|---|---|---|---|---|
| ಪ್ರಶ್ನಾ ಮಾದರಿ | MCQ | IM | 2M | 3M | 4M | 5M | ಪ್ರಶ್ನೆಗಳು | ಅಂಕಗಳು |
| ವಿಭಾಗಗಳು | | | | | | | | |
| ಇತಿಹಾಸ | 1(1) | 1(1) | 1(2) | 1(3) | 1(4) | 1(3) | 6 | 14 |
| ರಾಜ್ಯಶಾಸ್ತ್ರ | - | 1(1) | - | 1(3) | - | - | 2 | 04 |
| ಸಮಾಜಶಾಸ್ತ್ರ | - | 1(1) | 1(2) | - | - | - | 2 | 03 |
| ಭೂಗೋಳವಿಜ್ಞಾನ | 1(1) | - | 2(4) | - | 1(4) | 2* | 4 | 11 |
| ಅರ್ಥಶಾಸ್ತ್ರ | 1(1) | 1(1) | 1(2) | - | - | - | 3 | 04 |
| ವ್ಯವಹಾರ ಅಧ್ಯಯನ | 1(1) | - | - | 1(3) | - | - | 2 | 04 |
| ಒಟ್ಟು | 4(4) | 4(4) | 5(10) | 3(9) | 2(8) | 1(5) | 19 | 40 |

**ವಿಷಯ: ಸಮಾಜ ವಿಜ್ಞಾನ**

# ಎರಡನೆಯ ಸಂಕಲನಾತ್ಮಕ ಪರೀಕ್ಷೆ ನೀಲಿ ನಕಾಶೆ

**ತರಗತಿ: 8ನೇ ತರಗತಿ**

| ಕ್ರ. ಸಂ | ಉದ್ದೇಶಗಳು / ಅಧ್ಯಾಯಗಳು | ಜ್ಞಾನ | | | | | | ತಿಳುವಳಿಕೆ | | | | | | ಅನ್ವಯ | | | | | | ಕೌಶಲ | | | | | | ಒಟ್ಟು ಪ್ರಶ್ನೆ | ಒಟ್ಟು ಅಂಕ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | MCQ | IM | 2M | 3M | 4M | 5M | MCQ | IM | 2M | 3M | 4M | 5M | MCQ | IM | 2M | 3M | 4M | 5M | MCQ | IM | 2M | 3M | 4M | 5M | | |
| | **ಇತಿಹಾಸ** | | | | | | | | | | | | | | | | | | | | | | | | | **6** | 14 |
| 1 | ಮೌರ್ಯರು ಮತ್ತು ಕುಶಾಣರು | | | | | | | | | | | | | | | | 1(3) | | | | | | | | | 1 | 3 |
| 2 | ಗುಪ್ತರು ಮತ್ತು ವರ್ಧನರು | | 1(1) | | | | | | | | | | | | | | | | | | | | | | 2* | 2 | 3 |
| 3 | ದಕ್ಷಿಣ ಭಾರತ- ಶಾತವಾಹನರು, ಗಂಗರು & ಕದಂಬರು | | | | | | | | | 1(2) | | | | | | | | | | | | | | | | 1 | 3 |
| 4 | ಬಾದಾಮಿಯ ಚಾಳುಕ್ಯರು ಮತ್ತು ಕಂಚಿಯ ಪಲ್ಲವರು | | | | | | | | | 1(2) | | | | | | | | | | | | | | | 1 | | |
| 5 | ಮಾನ್ಯಖೇಟದ ರಾಷ್ಟ್ರಕೂಟರು & ಕಲ್ಯಾಣದ ಚಾಳುಕ್ಯರು | | | | | | | | | | | | | | | | | 1(4) | | | | | | | | 1 | 4 |
| 6 | ಚೋಳರು ಮತ್ತು ದ್ವಾರಸಮುದ್ರದ ಹೊಯ್ಸಳರು | 1(1) | | | | | | | | | | | | | | | | | | | | | | | | 1 | 1 |
| | **ರಾಜ್ಯಶಾಸ್ತ್ರ** | | | | | | | | | | | | | | | | | | | | | | | | | **2** | 4 |
| 1 | ಮಾನವ ಹಕ್ಕುಗಳು | | 1(1) | | | | | | | | | | | | | | | | | | | | | | | 1 | 1 |
| 2 | ಸ್ಥಳೀಯ ಸರ್ಕಾರಗಳು | | | | | | | | | | 1(3) | | | | | | | | | | | | | | | 1 | 3 |
| | **ಸಮಾಜಶಾಸ್ತ್ರ** | | | | | | | | | | | | | | | | | | | | | | | | | **2** | 3 |
| 1 | ಸಾಮಾಜಿಕ ಸಂಸ್ಥೆಗಳು | | | 1(2) | | | | | | | | | | | | | | | | | | | | | | 2 | 3 |
| 2 | ಸಮಾಜದ ಪ್ರಕಾರಗಳು | | | 1(2) | | | | | 1(1) | | | | | | | | | | | | | | | | | | |
| | **ಭೂಗೋಳ ವಿಜ್ಞಾನ** | | | | | | | | | | | | | | | | | | | | | | | | | **4** | 11 |
| 1 | ವಾಯುಗೋಳ | 1(1) | | | | | | | | | | | | | | 1(2) | | | | | | | | | | 2 | 3 |
| 2 | ಜಲಗೋಳ | | | | | | | | | | 1(3) | | | | | 1(2) | | | | | | | | | 2 | 1 | 4 |
| 3 | ಜೀವಗೋಳ | | | | | | | | | | | 1(4) | | | | | | | | | | | | | | 1 | 4 |
| | **ಅರ್ಥಶಾಸ್ತ್ರ** | | | | | | | | | | | | | | | | | | | | | | | | | **3** | 4 |
| 1 | ರಾಷ್ಟ್ರೀಯ ಆದಾಯ & ಅರ್ಥವ್ಯವಸ್ಥೆಯ ವಲಯಗಳು | | | | | | | | | 1(2) | 1(3) | | | | | | | | | | | | | | | 1 | 2 |
| 2 | ಸರ್ಕಾರ ಮತ್ತು ಅರ್ಥವ್ಯವಸ್ಥೆ | | | | | | | 1(1) | 1(1) | | | 1(4) | | | | | | | | | | | | | | 2 | 2 |
| | **ವ್ಯವಹಾರ ಅಧ್ಯಯನ** | | | | | | | | | | | | | | | | | | | | | | | | | **2** | 4 |
| 1 | ವ್ಯವಹಾರ ಮತ್ತು ಕೈಗಾರಿಕೆ | | | | | | | 1(1) | | | | | | | | | | | | | | | | | | 1 | 1 |
| 2 | ವಿವಿಧ ವ್ಯವಹಾರ ಸಂಘಟನೆಗಳು | | | | | | | | | | 1(3) | | | | | | | | | | | | | | | 1 | 3 |
| | **ಒಟ್ಟು** | 2(2) | 2(2) | 1(2) | - | - | | 2(2) | 2(2) | 2(4) | 2(6) | 1(4) | | - | - | 2(4) | 1(3) | 1(4) | - | - | - | - | - | - | 1(5) | **19** | **40** |
| | | **5(6)** | | | | | | **9(18)** | | | | | | **4(11)** | | | | | | **1(5)** | | | | | | | |

**ಸೂಚನೆ: ಆವರಣದ ಹೊರಗಿನ ಅಂಕಿಗಳು ಪ್ರಶ್ನೆಗಳ ಸಂಖ್ಯೆಗಳನ್ನು ಹಾಗೂ ಆವರಣದ ಒಳಗಿನ ಅಂಕಿಗಳು ಅಂಕಗಳನ್ನು ಸೂಚಿಸುತ್ತವೆ.**

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ

**ವಿಷಯ: ಸಮಾಜ ವಿಜ್ಞಾನ** **ಪ್ರಶ್ನೆ ಪತ್ರಿಕೆ ವಿಶ್ಲೇಷಣೆ** **ತರಗತಿ: 8ನೇ ತರಗತಿ**

| ಪ್ರಶ್ನೆ ಸಂಖ್ಯೆ | ಅಧ್ಯಾಯ | ಉದ್ದೇಶ | ನಿರೀಕ್ಷಿತ ಫಲ | ಪ್ರಶ್ನೆ ವಿಧ | ಅಂಕ | ಸಮಯ | ಪ್ರಶ್ನೆ ಕ್ಲಿಷ್ಟತೆ |
|---|---|---|---|---|---|---|---|
| **1** | ಚೋಳರು ಮತ್ತು ದ್ವಾರಸಮುದ್ರದ ಹೊಯ್ಸಳರು | ಸ್ಮರಣೆ | ಹೆಸರಿಸುವರು | ಬಹು ಆಯ್ಕೆ | 1 | 2 | ಸುಲಭ |
| **2** | ಸರ್ಕಾರ ಮತ್ತು ಅರ್ಥವ್ಯವಸ್ಥೆ | ತಿಳುವಳಿಕೆ | ತಿಳಿಸುವರು | ಬಹು ಆಯ್ಕೆ | 1 | 2 | ಸಾಧಾರಣ |
| 3 | ವಾಯುಗೋಳ | ಸ್ಮರಣೆ | ಸ್ಮರಿಸುವರು | ಬಹು ಆಯ್ಕೆ | 1 | 2 | ಸುಲಭ |
| 4 | ವ್ಯವಹಾರ ಮತ್ತು ಕೈಗಾರಿಕೆ | ತಿಳುವಳಿಕೆ | ನಿದರ್ಶಿಸುವರು | ಬಹು ಆಯ್ಕೆ | 1 | 2 | ಸುಲಭ |
| 5 | ಗುಪ್ತರು ಮತ್ತು ವರ್ಧನರು | ಸ್ಮರಣೆ | ಸ್ಮರಿಸುವರು | ಅತಿ ಕಿರು ಉತ್ತರ | 1 | 2 | ಸುಲಭ |
| 6 | ಮಾನವ ಹಕ್ಕುಗಳು | ಸ್ಮರಣೆ | ಸ್ಮರಿಸುವರು | ಅತಿ ಕಿರು ಉತ್ತರ | 1 | 2 | ಸಾಧಾರಣ |
| 7 | ಸಮಾಜದ ಪ್ರಕಾರಗಳು | ತಿಳುವಳಿಕೆ | ಅರ್ಥೈಸುವರು | ಅತಿ ಕಿರು ಉತ್ತರ | 1 | 2 | ಸುಲಭ |
| 8 | ಸರ್ಕಾರ ಮತ್ತು ಅರ್ಥವ್ಯವಸ್ಥೆ | ತಿಳುವಳಿಕೆ | ವ್ಯಾಖ್ಯಾನಿಸುವರು | ಅತಿ ಕಿರು ಉತ್ತರ | 1 | 2 | ಕಠಿಣ |
| 9 | ದಕ್ಷಿಣ ಭಾರತ/ಬಾದಾಮಿ ಚಾಳುಕ್ಯರು & ಪಲ್ಲವರು | ತಿಳುವಳಿಕೆ | ವಿವರಿಸುವರು | ಕಿರು ಉತ್ತರ | 2 | 4 | ಸುಲಭ |
| 10 | ವಾಯುಗೋಳ | ಅನ್ವಯ | ಸಮರ್ಥಿಸುವರು | ಕಿರು ಉತ್ತರ | 2 | 4 | ಸುಲಭ |
| 11 | ಸಾಮಾಜಿಕ ಸಂಸ್ಥೆಗಳು/ಸಮಾಜದ ಪ್ರಕಾರಗಳು | ಸ್ಮರಣೆ | ಸ್ಮರಿಸುವರು | ಕಿರು ಉತ್ತರ | 2 | 4 | ಸಾಧಾರಣ |
| 12 | ಜಲಗೋಳ | ಅನ್ವಯ | ಪುಷ್ಟೀಕರಿಸುವರು | ಕಿರು ಉತ್ತರ | 2 | 4 | ಸಾಧಾರಣ |
| 13 | ರಾಷ್ಟ್ರೀಯ ಆದಾಯ & ಅರ್ಥವ್ಯವಸ್ಥೆಯ ವಲಯಗಳು | ತಿಳುವಳಿಕೆ | ತಿಳಿಸುವರು | ಕಿರು ಉತ್ತರ | 2 | 4 | ಕಠಿಣ |
| 14 | ಮೌರ್ಯರು ಮತ್ತು ಕುಶಾಣರು | ಅನ್ವಯ | ವಿಶ್ಲೇಷಿಸುವರು | ದೀರ್ಘಉತ್ತರ | 3 | 8 | ಸುಲಭ |
| 15 | ಸ್ಥಳೀಯ ಸರ್ಕಾರಗಳು/ಜಲಗೋಳ | ತಿಳುವಳಿಕೆ | ವಿವರಿಸುವರು | ದೀರ್ಘಉತ್ತರ | 3 | 8 | ಸಾಧಾರಣ |
| 16 | ರಾಷ್ಟ್ರೀಯ ಆದಾಯ & ಅರ್ಥವ್ಯವಸ್ಥೆಯ ವಲಯಗಳು/ವಿವಧ ವ್ಯವಹಾರ ಸಂಘಟನೆಗಳು | ತಿಳುವಳಿಕೆ | ಪಟ್ಟಿಮಾಡುವರು | ದೀರ್ಘಉತ್ತರ | 3 | 8 | ಸಾಧಾರಣ |
| 17 | ಮಾನ್ಯಖೇಟದ ರಾಷ್ಟ್ರಕೂಟರು & ಕಲ್ಯಾಣದ ಚಾಳುಕ್ಯರು | ಅನ್ವಯ | ಸಮರ್ಥಿಸುವರು | ಅತಿ ದೀರ್ಘಉತ್ತರ | 4 | 9 | ಸಾಧಾರಣ |
| 18 | ಜೀವಿಗೋಳ/ಸರ್ಕಾರ ಮತ್ತು ಅರ್ಥವ್ಯವಸ್ಥೆ | ತಿಳುವಳಿಕೆ | ವಿವರಿಸುವರು | ಅತಿ ದೀರ್ಘಉತ್ತರ | 4 | 9 | ಸಾಧಾರಣ |
| 19 | ಗುಪ್ತರು ಮತ್ತು ವರ್ಧನರು/ಬಾದಾಮಿಯ ಚಾಳುಕ್ಯರು & ಕಂಚಿಯ ಪಲ್ಲವರು/ ಜಲಗೋಳ | ಕೌಶಲ | ಗುರುತಿಸುವರು | ಅತಿ ದೀರ್ಘಉತ್ತರ | 5 | 7 | ಕಠಿಣ |
| | | | | | **40** | **85 ನಿಮಿಷಗಳು ( 5 ನಿಮಿಷಗಳು ಪ್ರಶ್ನೆ ಪತ್ರಿಕೆ ಓದಲು ನಿಗಧಿಗೊಳಿಸಲಾಗಿದೆ.)** | |

# ಎರಡನೆಯ ಸಂಕಲನಾತ್ಮಕ ಪರೀಕ್ಷೆ

**ಸಮಯ: 90 ನಿಮಿಷಗಳು** **8ನೇ ತರಗತಿ- ಸಮಾಜ ವಿಜ್ಞಾನ** **ಗರಿಷ್ಠ ಅಂಕಗಳು:40**

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರ ಬರೆಯಿರಿ.** **4X1=4**

1. ತಂಜಾವೂರಿನ ಬೃಹದೀಶ್ವರ ದೇವಾಲಯವನ್ನು ನಿರ್ಮಿಸಿದವರು

A) ಒಂದನೆಯ ರಾಜೇಂದ್ರ B) ಒಂದನೆಯ ರಾಜರಾಜ C) ವಿಷ್ಣುವರ್ಧನ D) ಕರಿಕಾಲ ಚೋಳ

2. ಜನರಿಗೆ ಸರ್ಕಾರಿ ಸೇವೆಯು ತ್ವರಿತವಾಗಿ ವಿದ್ಯುನ್ಮಾನ ರೂಪದಲ್ಲಿ ದೊರಕಿಸಿಕೊಡಲು ಸರ್ಕಾರವು ಜಾರಿಗೆ ತಂದಿರುವ ಕಾರ್ಯಕ್ರಮ.

A) ಡಿಜಿಟಲ್ ಇಂಡಿಯಾ B) ಮೇಕ್ ಇನ್ ಇಂಡಿಯಾ C) ಮುದ್ರಾ ಯೋಜನೆ D) ಸ್ಕಿಲ್ ಇಂಡಿಯಾ

3. ವಾಯುಗೋಳದ ಉಷ್ಣಾಂಶವನ್ನು ಅಳೆಯಲು ಬಳಸುವ ಮಾಪಕ ಇದಾಗಿದೆ.

A) ವಾಯುಭಾರ ಮಾಪಕ B) ಭರತಮಾಪಕ C) ಉಷ್ಣತಾಮಾಪಕ D) ದುಗ್ದಮಾಪಕ

4. ಪುನರ್ ರಫ್ತು ವ್ಯಾಪಾರಕ್ಕೆ ಈ ಪಟ್ಟಣವು ಒಂದು ಮುಖ್ಯ ನಿದರ್ಶನವಾಗಿದೆ.

A) ಮುಂಬೈ B) ಹಾಂಗಕಾಂಗ್ C) ಮಲೇಷಿಯಾ D) ಸಿಂಗಾಪುರ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **4X1=4**

5. ಸಮುದ್ರಗುಪ್ತನ ಸಾಧನೆಗಳನ್ನು ವಿವರಿಸುವ ಶಾಸನ ಯಾವುದು?
6. ಭಾರತದಲ್ಲಿ ಮಾಹಿತಿ ಹಕ್ಕು ಕಾಯ್ದೆ ಯಾವಾಗ ಜಾರಿಗೆ ಬಂದಿತು?
7. ಪಶುಪಾಲನ ಸಮಾಜ ಎಂದರೇನು?
8. ಯೋಜನೆಯನ್ನು ವ್ಯಾಖ್ಯಾನಿಸಿ.

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **5X2=10**

9. ಗಂಗರ ಸಮಾಜವು ಯಾವ ಮೌಲ್ಯಗಳಿಂದ ಪ್ರಭಾವಿತವಾಗಿದ್ದಿತು? **ಅಥವಾ** ಇಮ್ಮಡಿ ಪುಲಿಕೇಶಿಯ ಸಾಧನೆಗಳನ್ನು ವಿವರಿಸಿ.
10. 'ವಾಯುಗೋಳವು ಭೂಮಿಯ ಎಲ್ಲಾ ಬಗೆಯ ಜೀವಿಗಳಿಗೆ ಅತ್ಯಾವಶ್ಯಕವಾಗಿದೆ.' ಸಮರ್ಥಿಸಿ.
11. ಸಾಮಾಜಿ ಸಂಸ್ಥೆಗಳ ಮಹತ್ವವನ್ನು ತಿಳಿಸಿ. **ಅಥವಾ** ಗ್ರಾಮೀಣ ಸಮಾಜದ ಲಕ್ಷಣಗಳೇನು?
12. 'ಉಬ್ಬರವಿಳಿತಗಳು ಮಾನವನಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಉಪಯುಕ್ತವಾಗಿವೆ.' ಪುಷ್ಠೀಕರಿಸಿ.
13. ರಾಷ್ಟ್ರದ ಆರ್ಥಿಕಾಭಿವೃದ್ಧಿಯಲ್ಲಿ ಸಣ್ಣ ಕೈಗಾರಿಕೆಗಳ ಮಹತ್ವವನ್ನು ವಿವರಿಸಿ.

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಆರು ವಾಕ್ಯಗಳಲ್ಲಿ ಉತ್ತರಿಸಿ.** **3X3=9**

14. ಅಶೋಕನನ್ನು ಒಬ್ಬ ಮಹಾಶಯನೆಂದು ಇತಿಹಾಸಕಾರರು ಬಣ್ಣಿಸಿದ್ದಾರೆ. ಕಾರಣವನ್ನು ವಿಶ್ಲೇಷಿಸಿ
15. ಸ್ಥಳೀಯ ಸರ್ಕಾರದ ಕಾರ್ಯಗಳನ್ನು ವಿವರಿಸಿ. **ಅಥವಾ** ಸಾಗರಗಳ ಸಂರಕ್ಷಣೆಗೆ ಕೈಗೊಳ್ಳಬಹುದಾದ ಕ್ರಮಗಳನ್ನು ತಿಳಿಸಿ.
16. ಭಾರತದಲ್ಲಿ ಕೃಷಿ ಬಿಕ್ಕಟ್ಟಿಗೆ ಪರಿಹಾರ ಕ್ರಮಗಳನ್ನು ತಿಳಿಸಿ. **ಅಥವಾ** ಏಕವ್ಯಕ್ತಿ ಮಾಲಿಕತ್ವ ವ್ಯವಹಾರ ಸಂಸ್ಥೆಗಳ ಪ್ರಯೋಜನಗಳನ್ನು ಪಟ್ಟಿಮಾಡಿ.

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **2X4=8**

17. "ಕಲ್ಯಾಣ ಚಾಳುಕ್ಯರು ಕಲೆ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ಅಪಾರವಾದ ಕೊಡುಗೆಗಳನ್ನು ನೀಡಿದ್ದಾರೆ." ಈ ಹೇಳಿಕೆಯನ್ನು ಸಮರ್ಥಿಸಿ.
18. ವಾಯುಮಾಲಿನ್ಯ ಮತ್ತು ಜಲಮಾಲಿನ್ಯವನ್ನು ನಿಯಂತ್ರಿಸುವ ಕ್ರಮಗಳನ್ನು ತಿಳಿಸಿ. **ಅಥವಾ** ಭಾರತದ ಯೋಜನೆಗಳ ಉದ್ದೇಶಗಳಾವುವು?

**VI. 19 ಭಾರತದ ನಕ್ಷೆಯನ್ನು ಬರೆದು ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ.** **1+4=5**

ಎ) ಪಾಟಲೀಪುತ್ರ ಬಿ) ನರ್ಮದಾ ನದಿ

ಸಿ) ಅರಬ್ಬಿಸಮುದ್ರ ಡಿ) ಬಂಗಾಳಕೊಲ್ಲಿ

## ಮಾದರಿ ಉತ್ತರಗಳು

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರ ಬರೆಯಿರಿ.**

1 B) ಒಂದನೆಯ ರಾಜರಾಜ

2. A) ಡಿಜಿಟಲ್ ಇಂಡಿಯಾ

3. C) ಉಷ್ಣತಾ ಮಾಪಕ

4. D) ಸಿಂಗಾಪುರ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

5. ಅಲಹಾಬಾದ್ ಸ್ತಂಭ ಶಾಸನ

6. 2005

7. ಜನರು ತಮ್ಮ ಜೀವನಾಧಾರಕ್ಕೆ ಪಶುಗಳನ್ನು ಹಿಂಡು-ಹಿಂಡಾಗಿ ಸಾಕುವ ಸಮಾಜವನ್ನು ಪಶುಪಾಲನಾ ಸಮಾಜ ಎನ್ನುವರು.

8. ಸರ್ವರ ಹಿತಾಸಕ್ತಿಗಾಗಿ ಲಭ್ಯ ಸಂಪನ್ಮೂಲಗಳ ವ್ಯವಸ್ಥಿತ ವಿನಿಯೋಜನೆ ಮತ್ತು ಇತರ ಉದ್ದೇಶಪೂರ್ವಕ ಕ್ರಮಗಳನ್ನು ಅಳವಡಿಸಿಕೊಂಡು ಪೂರ್ವ ನಿಗದಿತ ಗುರಿಗಳ ಸಾಧನೆಯತ್ತ ಸಾಗುವುದೇ ಯೋಜನೆ.

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

9. ಗಂಗರ ಸಮಾಜವು ಸತ್ಯಶೀಲತೆ, ಸ್ವಾಮಿನಿಷ್ಠೆ, ಶೌರ್ಯ ಮತ್ತು ತಾಳ್ಮೆ ಎಂಬ ಮೌಲ್ಯಗಳಿಂದ ಪ್ರಭಾವಿತವಾಗಿದ್ದಿತು.

**ಅಥವಾ**

* ಇಮ್ಮಡಿ ಪುಲಿಕೇಶಿಯು ಬಾದಾಮಿ ಚಾಳುಕ್ಯರ ಪ್ರಸಿದ್ಧ ದೊರೆ. * ಗಂಗರು, ಕದಂಬರು ಮತ್ತು ಅಳುಪರನ್ನು ಸೋಲಿಸಿದನು.
* ಹರ್ಷವರ್ಧನನ್ನು ಸೋಲಿಸಿ "ದಕ್ಷಿಣಾ ಪಥೇಶ್ವರ", "ತ್ರಿಸಾಗರಗಳಿಂದಾವರಿಸಿದ ಪ್ರದೇಶದ ಅಧಿಪತಿ" ಎನಿಸಿದನು.

10. * ವಾಯುಗೋಳದ ಕೆಲವು ಅನಿಲಗಳು ಮಾನವ ಮತ್ತು ಇತರ ಜೀವಿಗಳ ಉಸಿರಾಟಕ್ಕೆ ಅವಶ್ಯವಾಗಿದೆ.
* ಸಸ್ಯಗಳು ಆಹಾರ ಉತ್ಪಾದಿಸಲು ನೆರವಾಗುತ್ತದೆ. * ಭೂಮಿಯನ್ನು ಜೀವಂತ ಗ್ರಹವಾಗಿರುವಂತೆ ಮಾಡಿದೆ.
* ಆದ್ದರಿಂದ ವಾಯುಗೋಳವು ಎಲ್ಲಾ ಜೀವಿಗಳಿಗೆ ಅತ್ಯಾವಶ್ಯಕವಾಗಿದೆ.

11. * ಸರ್ವವ್ಯಾಪಕವಾದುದು * ರಕ್ಷಣೆ ಮತ್ತು ಸಂಪೋಷಣೆಗೆ ಅಗತ್ಯವಾದುದು.
* ವ್ಯಕ್ತಿತ್ವ ನಿರ್ಮಾಣಕ್ಕೆ ಸಹಾಯಕ. * ಬದುಕನ್ನು ಗಟ್ಟಿಗೊಳಿಸುತ್ತದೆ.

**ಅಥವಾ**

* ಗಾತ್ರದಲ್ಲಿ ಚಿಕ್ಕದು. * ಸರಳ ಆರ್ಥಿಕ ಜೀವನ.
* ನೆರೆಹೊರೆ. * ಪ್ರಾಥಮಿಕ ಮತ್ತು ಕೌಟುಂಬಿಕ ಸಂಬಂಧಗಳ ಪ್ರಭಾವ.

12. * ನೌಕಾಯಾನಕ್ಕೆ ಸಹಾಯಕ * ಬಂದರು ಮತ್ತು ಹಡಗು ನಿಲ್ದಾಣ ನಿರ್ಮಿಸಲು ಸಹಾಕಾರಿ
* ತೀರವು ಸ್ವಚ್ಛಗೊಳ್ಳುತ್ತದೆ * ಉಪ್ಪು ಮತ್ತು ವಿದ್ಯುಚ್ಛಕ್ತಿ ತಯಾರಿಕೆಗೆ ಉಪಯುಕ್ತ
* ಮೀನುಗಾರಿಕೆಗೆ ಸಹಕಾರಿ.

13. * ಉದ್ಯೋಗ ಸೃಷ್ಟಿ * ಆದಾಯದ ಸಮ ಹಂಚಿಕೆ * ಸಂಪನ್ಮೂಲಗಳ ಕ್ರೋಡೀಕರಣ
* ಕೈಗಾರಿಕೆಗಳ ಪ್ರಾದೇಶಿಕ ವಿಸ್ತರಣೆ * ರಫ್ತು ಉತ್ತೇಜನ * ತಂತ್ರಜ್ಞಾನ ಅಭಿವೃದ್ಧಿ.

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಆರು ವಾಕ್ಯಗಳಲ್ಲಿ ಉತ್ತರಿಸಿ.**

14. * ಭಾರತದ ಇತಿಹಾಸದಲ್ಲಿ ಅಶೋಕನು ಒಬ್ಬ ಪ್ರಸಿದ್ಧ ದೊರೆ.
* ಕಳಿಂಗ ಯುದ್ಧದ ಸಾವು ನೋವಿನಿಂದ ನೊಂದ ಅಶೋಕನು ಧರ್ಮದ ವಿಜಯವೇ ಮುಖ್ಯ ಎಂದು ಭಾವಿಸಿದನು.
* ನಂತರ ಬೌದ್ಧ ಧರ್ಮವನ್ನು ಸ್ವೀಕರಿಸಿದನು. * ಪ್ರಾಣಿ, ಪಕ್ಷಿಗಳ ಹತ್ಯೆಯನ್ನು ನಿಷೇಧಿಸಿದನು.

* ಪ್ರಜೆಗಳೆಲ್ಲರೂ ತನ್ನ ಮಕ್ಕಳೆಂದು ಭಾವಿಸಿದನು. * ತಂದೆ, ತಾಯಿ, ಗುರು ಹಿರಿಯರನ್ನು ಗೌರವಿಸಬೇಕೆಂದು ಹೇಳಿದನು.
* ದೀನರು ಮತ್ತು ಗುಲಾಮರಿಗೆ ದಯೆ ತೋರಬೇಕೆಂದನು. * ತಾವೂ ಬದುಕಿ, ಇತರರನ್ನು ಬದುಕಲು ಬಿಡಿ ಎಂದು ಬೋಧಿಸಿದನು.
* ಸಾಮ್ರಾಜ್ಯದ ಉದ್ದಗಲಕ್ಕೂ ಧರ್ಮ ಸಂದೇಶ ಸಾರುವ ಶಾಸನಗಳನ್ನು ಹಾಕಿಸಿದನು.

15. * ಪಂಚಾಯಿತಿ ಆಸ್ತಿಯನ್ನು ರಕ್ಷಿಸುವುದು. * ಸ್ಥಳೀಯ ಮಂಡಳಿಯ ವಾರ್ಷಿಕ ಆಯವ್ಯಯವನ್ನು ತಯಾರಿಸುವುದು.
* ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆಯನ್ನು ಕೈಗೊಳ್ಳುವುದು. * ಪ್ರಾಥಮಿಕ, ಪ್ರೌಢ, ವಯಸ್ಕರ ಶಿಕ್ಷಣಕ್ಕೆ ಪ್ರೋತ್ಸಾಹ
* ಸ್ವಚ್ಛತೆ ಮತ್ತು ನಿರ್ಮಲೀಕರಣ ಕಾಪಾಡುವುದು. * ಕೃಷಿ, ಪಶು ಸಂಗೋಪನೆ, ಕರಕುಶಲ ಉದ್ಯೋಗಗಳಿಗೆ ಪ್ರೋತ್ಸಾಹ
* ವಾಚನಾಲಯ, ಬೀದಿ ದೀಪ ಮತ್ತು ಮಾರುಕಟ್ಟೆ ಸೌಲಭ್ಯ ಒದಗಿಸುವುದು.

**ಅಥವಾ**

* ಕಚ್ಚಾ ತೈಲವನ್ನು ಕೊಳವೆ ಮಾರ್ಗದ ಮೂಲಕ ಸಾಗಿಸುವುದು.
* ಅಣು ಇಂಧನ ತಾಜ್ಯವನ್ನು ಸಾಗರಗಳಿಗೆ ಹಾಕದಿರುವುದು.
* ಬಂದರು ಮತ್ತು ರೇವು ಪಟ್ಟಣಗಳಲ್ಲಿ ಯಾವುದೇ ತಾಜ್ಯವನ್ನು ಹಾಕದಿರುವುದು.
* ತೀರಗಳಲ್ಲಿ ಅದಿರು ಮತ್ತು ಗಣಿಗಾರಿಕೆ ನಿಯಂತ್ರಣ
* ಕರಾವಳಿಯ ಮರಳುದಂಡೆಗಳ ವಿನಾಶದ ನಿಯಂತ್ರಣ
* ತೀರಗಳಲ್ಲಿ ಪೆಟ್ರೋ-ರಾಸಾಯನಿಕ ಹೊರ ಹಾಕುವ ದುರ್ಗಂಧ ವಸ್ತುಗಳ ನಿಯಂತ್ರಣ.

16. * ಸರ್ಕಾರದ ಹೂಡಿಕೆ ಹೆಚ್ಚಳ * ಸಾಲ ಸೌಲಭ್ಯಗಳ ವಿಸ್ತರಣೆ
* ಮಾರುಕಟ್ಟೆ ಸುಧಾರಣೆ * ಬೆಳೆ ವಿಮೆ
* ಸಲಹೆ ಮತ್ತು ನೈತಿಕ ಬೆಂಬಲ * ಖಾಸಗಿ ಲೇವಾದೇವಿಗಾರರ ನಿಯಂತ್ರಣ

**ಅಥವಾ**

* ಸ್ವಂತ ಬಂಡವಾಳದಿಂದ ಪ್ರಾರಂಭಿಸಬಹುದು * ಇವುಗಳ ಪ್ರಾರಂಭಕ್ಕೆ ಕಾನೂನು ಕಟ್ಟಲೆಗಳ ಅವಶ್ಯಕತೆ ಇಲ್ಲ.
* ಅನುದಿನದ ವಹಿವಾಟುಗಳನ್ನು ನೋಡಿಕೊಳ್ಳುವುದು ಸುಲಭ. * ಗ್ರಾಹಕರೊಂದಿಗೆ ನೇರ ಸಂಪರ್ಕ
* ಸರ್ಕಾರಕ್ಕೆ ಸಕಾಲದಲ್ಲಿ ತೆರಿಗೆ ಪಾವತಿಸುತ್ತಾರೆ. * ವ್ಯಾಪಾರದ ಮೇಲ್ವಿಚಾರಣೆ ತಾವೇ ನೋಡಿಕೊಳ್ಳುತ್ತಾರೆ.
* ಶೀಘ್ರ ನಿರ್ಧಾರ ತೆಗೆದುಕೊಳ್ಳುತ್ತಾರೆ ಮತ್ತು ವ್ಯವಹಾರದ ಗೌಪತ್ಯೆ ಕಾಪಾಡಿಕೊಳ್ಳುತ್ತಾರೆ.

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

17. **ಕಲೆ:** * ಕಲ್ಯಾಣದ ಚಾಳುಕ್ಯರು ಕಲಾಭಿಮಾನಿಗಳಾಗಿದ್ದರು.
* ಲಕ್ಕುಂಡಿಯ ಕಾಶಿ ವಿಶ್ವೇಶ್ವರ, ಇಟಗಿಯ ಮಹಾದೇವ ದೇವಾಲಯ, ಕುರುವತ್ತಿಯ ಮಲ್ಲಿಕಾರ್ಜುನ ಮಂದಿರ, ಗದಗಿನ ತ್ರಿಕೂಟೇಶ್ವರ ದೇವಾಲಯಗಳ ಇವರ ಕಾಲದ ಪ್ರಮುಖ ದೇವಾಯಲಗಳು.
* ಇವರು ನೂರಾರು ದೇವಾಲಯ ನಿರ್ಮಿಸಿ ಕನ್ನಡ ನಾಡನ್ನು ಕಲೆಯ ಬೀಡಾಗಿ ಪರಿವರ್ತಿಸಿದರು.

**ಸಾಹಿತ್ಯ:** * ಕಲ್ಯಾಣದ ಚಾಳುಕ್ಯರು ಸಾಹಿತ್ಯಕ್ಕೆ ಅಪಾರ ಪ್ರೋತ್ಸಾಹ ನೀಡಿದ್ದರು.
* ರನ್ನನ 'ಗದಾಯುದ್ಧ', ದುರ್ಗಸಿಂಹನ 'ಪಂಚತಂತ್ರ', ಬಿಲ್ಹಣನ 'ವಿಕ್ರಮಾಂಕದೇವ ಚರಿತ', ನಯಸೇನನ 'ಧರ್ಮಾಮೃತ' ಹಾಗೂ ವಿಜ್ಞಾನೇಶ್ವರನ 'ಮಿತಾಕ್ಷರ' ಈ ಕಾಲದ ಪ್ರಮುಖ ಗ್ರಂಥಗಳು.
* 3ನೇ ಸೋಮೇಶ್ವರನು 'ಮಾನಸೋಲ್ಲಾಸ' ಎಂಬ ವಿಶ್ವಕೋಶ ರಚಿಸಿದನು.
* ವಚನ ಸಾಹಿತ್ಯ ಇವರ ಕಾಲದ ವಿಶಿಷ್ಠ ಕೊಡುಗೆ.

18. **ವಾಯುಮಾಲಿನ್ಯ ನಿಯಂತ್ರಿಸುವ ಕ್ರಮಗಳು:**
* ಮಾಲಿನ್ಯಕಾರಕ ಅನಿಲಗಳ ನಿಯಂತ್ರಣ * ವಾಹನಗಳಿಂದ ಬರುವ ಹೊಗೆ ನಿಯಂತ್ರಣ
* ಹೆಚ್ಚು ಅರಣ್ಯ ಬೆಳೆಸುವುದು. * ಅಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳ ಬಳಕೆ.
* ಕಾನೂನು ನಿಯಂತ್ರಣ. * ಶಿಕ್ಷಣ ಮತ್ತು ಜನ ಜಾಗೃತಿ.

**ಜಲಮಾಲಿನ್ಯ ನಿಯಂತ್ರಣ ಕ್ರಮಗಳು:**

* ಕೈಗಾರಿಕಾ ತಾಜ್ಯಗಳ ಸಂಸ್ಕರಣೆ.
* ಚರಂಡಿ ನೀರಿನ ಸಂಸ್ಕರಣೆ.
* ಕುಡಿಯುವ ನೀರಿನ ಮೂಲಗಳ ಸ್ವಚ್ಛತೆ.
* ಕಸದ ರಾಶಿಗಳನ್ನು ಜಲರಾಶಿಗಳಲ್ಲಿ ಹಾಕಬಾರದು.

**ಅಥವಾ**

* ಆರ್ಥಿಕ ಬೆಳವಣಿಗೆಯ ವೃದ್ಧಿ.
* ಸ್ವಾವಲಂಬನೆ ಸಾಧಿಸುವುದು.
* ಹಣಕಾಸು ಸಂಸ್ಥೆಗಳ ಅಭಿವೃದ್ಧಿ.
* ಖಾಸಗಿ ವಲಯದ ಉತ್ತೇಜನ.
* ಅರ್ಥವ್ಯವಸ್ಥೆಯ ಆಧುನೀಕರಣ.
* ಮೂಲ ಸೌಕರ್ಯದ ವೃದ್ಧಿ.
* ಸಮತೋಲಿತ ಪ್ರಾದೇಶಿಕ ಅಭಿವೃದ್ಧಿ.
* ಆದಾಯ ಮತ್ತು ಸಂಪತ್ತಿನ ಸಮಾನ ಹಂಚಿಕೆ.

**VI. 19 ಭಾರತದ ನಕ್ಷೆಯನ್ನು ಬರೆದು ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ.**

